## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

### ಸಿ.ಸಿ. ಸಂಃ 581/2023

| | | |
|---|---|---|
| ಸಾಕ್ಷಿಯ ಹೆಸರುಃ | ಲೋಕೇಶ | ಫ್ರಾಸಾಃಃ 1 |
| ತಂದೆ ಹೆಸರುಃ | ಪಾಪಯ್ಯ | ಚಾಸಾಃಃ 1 |
| ವಯಸ್ಸುಃ | 37 ವರ್ಷ | ಪ್ರಮಾಣೀಕರಿಸಿದ<br>ದಿಃ 29/10/2024 |
| ಉದ್ಯೋಗಃ | ಸಹಾಯಕ ಅಂಚೆ ಅಧೀಕ್ಷಕ, ಮಂಗಳೂರು ಅಂಚೆ ವಿಭಾಗ | |
| ವಾಸ ಸ್ಥಳಃ | ಮಂಗಳೂರು. | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನಾನು ದಿಃ 28/07/2017 ರಿಂದ 31/12/2020 ರವರೆಗೂ ಮೈಸೂರು ವಿಭಾಗಕ್ಕೆ ಸೇರಿದ ಕೆ.ಆರ್ ನಗರ ಅಂಚೆ ಉಪ ವಿಭಾಗದಲ್ಲಿ ಅಂಚೆ ನಿರೀಕ್ಷಕನಾಗಿ ಸೇವೆ ಸಲ್ಲಿಸಿರುತ್ತೇನೆ.

2. ಆರೋಪಿತರು ದಿಃ 01/07/2010 ರಿಂದ 19/08/2018 ರವರೆಗೂ ಪಿರಿಯಾಪಟ್ಟಣ ತಾಲ್ಲೂಕಿನ ಕಣಗಾಲು ಉಪ ಅಂಚೆ ಕಚೇರಿಗೆ ಸೇರಿದ ಹೊನ್ನಾಪುರ ಗ್ರಾಮೀಣ ಅಂಚೆ ಕಚೇರಿಯಲ್ಲಿ ಗ್ರಾಮೀಣ ಶಾಖಾ ಅಂಚೆ ಪಾಲಕರಾಗಿ ಸೇವೆ ಸಲ್ಲಿಸಿರುತ್ತಾರೆ. ತದನಂತರ ದಿಃ21/08/2019 ರಂದು ಹುಣಸೂರು ವಿಭಾಗಕ್ಕೆ ಸೇರಿದ ಹುಣಸೂರು ಅಂಚೆ ಕಚೇರಿಯಲ್ಲಿ ಅಂಚೆ ಪೇದೆಯಾಗಿ ಬಡ್ತಿ ಹೊಂದಿ ನಿಯುಕ್ತಿ ಹೊಂದಿರುತ್ತಾರೆ. ಆರೋಪಿತರು ಹೊನ್ನಾಪುರ ಗ್ರಾಮೀಣಾ ಅಂಚೆ ಕಚೇರಿಯಲ್ಲಿ ಸೇವೆ ಸಲ್ಲಿಸುವಾಗ ಕೆಲವು ಠೇವಣಿದಾರರಿಂದ ಹಣವನ್ನು ಸ್ವೀಕರಿಸಿ, ಇಲಾಖೆಗೆ ಆ ಹಣವನ್ನು ಕಟ್ಟದೇ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಮಾಹಿತಿ ನೀಡಿ, ಜನರನ್ನು ನಂಬಿಸಿ ಇಲಾಖೆಗೆ ನಷ್ಟ ಎಸಗಿರುತ್ತಾರೆ. ಅವುಗಳ ವಿವರಗಳು ಯಾವುದೆಂದರೆ, ಹಳೆಯ ಖಾತೆ ಸಂಃ917374 ಈ ಖಾತೆಯ ಹೊಸ ಖಾತೆ ಸಂಃ2368773107 ಈ

ಖಾತೆಯು ಉಳಿತಾಯ ಖಾತೆ (ಎಸ್.ಬಿ)ಯಾಗಿದ್ದು ಶ್ರೀ ಪುಟ್ಟಶೆಟ್ಟಿ ಬಿನ್ ವೀರಶೆಟ್ಟಿ ಸೂಳೇಕೊಟೆ ಗ್ರಾಮ ಇವರ ಹೆಸರಿನಲ್ಲಿ ತೆರೆದಿದ್ದು, ಠೇವಣಿದಾರರಿಗೆ ಪಾಸ್ ಪುಸ್ತಕವನ್ನು ಹಿಂದಿರುಗಿಸದೇ ಈ ಖಾತೆ ಸಂಖ್ಯೆಯ ಪಾಸ್ ಪುಸ್ತಕದ ಮೊದಲ 4 ಪುಟಗಳನ್ನು ಹರಿದುಹಾಕಿ, ಪುಟ ಸಂಃ5 ರಲ್ಲಿ ಇದೇ ಸಂಖ್ಯೆಯ ಖಾತೆಯ ಸಂಖ್ಯೆಯನ್ನು ಬರೆದು ದಿಃ12/09/2016 ರಂದು ಶ್ರೀ ಸತೀಶ ಬಿನ್ ರಾಜು ಇವರಿಂದ ರೂ.1,50,000/- ಗಳನ್ನು ಠೇವಣಿದಾರರಿಂದ ಸ್ವೀಕರಿಸಿ MIS (ಮಾಸಿಕ ವರಮಾನ ಖಾತೆ)ವಿವರಗಳನ್ನು ಬರೆದು ಹೊನ್ನಾಪುರ ಗ್ರಾಮೀಣ ಅಂಚೆ ಕಚೇರಿಗೆ ಸೇರಿದ ದಿನಾಂಕ ಮುದ್ರೆಯನ್ನು ಒತ್ತಿ ನಕಲಿ ದಾಖಲೆ ಸೃಷ್ಟಿಸಿ ಅಂಚೆ ಇಲಾಖೆಯ ಖಾತೆಗೆ ಹಣವನ್ನು ಜಮಾವಣೆ ಮಾಡದೇ ವಂಚಿಸಿರುತ್ತಾರೆ.

3. ಹಾಗೆಯೇ ಹಳೆಯ ಖಾತೆ ಸಂಃ926698 ಈ ಖಾತೆಯ ಹೊಸ ಖಾತೆ ಸಂಃ 2368731992, ಈ ಖಾತೆಯು ಉಳಿತಾಯ ಖಾತೆ (ಎಸ್.ಬಿ)ಯಾಗಿದ್ದು ಶ್ರೀ ಶ್ರೀಮತಿ ತಿಮ್ಮಮ್ಮ ಕೋಂ ಸಣ್ಣೇಗೌಡ, ಹೊನ್ನಾಪುರ ಗ್ರಾಮ ಇವರ ಹೆಸರಿನಲ್ಲಿ ತೆರೆದಿದ್ದು, ಠೇವಣಿದಾರರಿಗೆ ಪಾಸ್ ಪುಸ್ತಕವನ್ನು ಹಿಂದಿರುಗಿಸದೇ ಈ ಖಾತೆ ಸಂಖ್ಯೆಯ ಪಾಸ್ ಪುಸ್ತಕದ ಮೊದಲ 4 ಪುಟಗಳನ್ನು ಹರಿದುಹಾಕಿ, ಪುಟ ಸಂಃ 5 ರಲ್ಲಿ ಇದೇ ಸಂಖ್ಯೆಯ ಖಾತೆಯ ಸಂಖ್ಯೆಯನ್ನು ಬರೆದು ದಿಃ19/06/2017 ರಂದು ಶ್ರೀ ಹೆಚ್ ಟಿ ಶ್ರೀನಿವಾಸ ಬಿನ್ ತಮ್ಮಯ್ಯ, ಹೊನ್ನಾಪುರ ಇವರಿಂದ ರೂ.60,000/- ಗಳನ್ನು ಠೇವಣಿದಾರರಿಂದ ಸ್ವೀಕರಿಸಿ MIS (ಮಾಸಿಕ ವರಮಾನ ಖಾತೆ) ಅವರ ವಿವರಗಳನ್ನು 5 ನೇ ಪುಟದಲ್ಲಿ MIS ಖಾತೆ ತೆರೆದಿರುವುದಾಗಿ ಬರೆದು ಹೊನ್ನಾಪುರ ಗ್ರಾಮೀಣ ಅಂಚೆ ಕಚೇರಿಗೆ ಸೇರಿದ ದಿನಾಂಕ ಮುದ್ರೆಯನ್ನು ಒತ್ತಿ, ಇಲಾಖೆಯ ನಕಲಿ ದಾಖಲೆ ಸೃಷ್ಟಿಸಿ ಅಂಚೆ ಇಲಾಖೆಯ ಖಾತೆಗೆ ಹಣವನ್ನು ಜಮಾವಣೆ ಮಾಡದೇ ವಂಚಿಸಿರುತ್ತಾರೆ.

4. ಹಾಗೆಯೇ ಹಳೆಯ ಖಾತೆ ಸಂಃ 927395 ಈ ಖಾತೆಯ ಹೊಸ ಖಾತೆ ಸಂಃ 2368757220, ಈ ಖಾತೆಯು ಉಳಿತಾಯ ಖಾತೆ (ಎಸ್.ಬಿ)ಯಾಗಿದ್ದು ಶ್ರೀಮತಿ ಮಹದೇವಮ್ಮ ಕೋಂ ಗೋಪಾಲಗೌಡ, ಹೊನ್ನಾಪುರ ಗ್ರಾಮ ಇವರಿಗೆ ಸಂಬಂದಿಸಿದ್ದಾಗಿರುತ್ತದೆ. ಈ ಖಾತೆಗೆ ಸಂಬಂಧಿಸಿದ ಪಾಸ್ ಪುಸ್ತಕವನ್ನು ಖಾತೆದಾರರಿಗೆ ಹಿಂದಿರುಗಿಸದೇ ಮೊದಲ 4 ಪುಟಗಳನ್ನು ಹರಿದುಹಾಕಿ, ಪುಟ ಸಂಃ5 ರಲ್ಲಿ ಶ್ರೀಮತಿ ಸರೋಜಮ್ಮ ಕೋಂ ಚಂದ್ರಶೇಖರ ಹೆಚ್.ಎಸ್ ದೊಡ್ಡಮಂಡಿಗನಹಳ್ಳಿ ಗ್ರಾಮ, ಕಂದಲಿ ಅಂಚೆ, ಹಾಸನ, ಖಾತೆ ತೆರೆದ ದಿಃ

11/08/2018 ಹಾಗೂ ಹಣ ನಾಲ್ಕು ಲಕ್ಷ ರೂಪಾಯಿಗಳು ಎಂದು ಬರೆದು ಬಡ್ಡಿ ಪ್ರತಿ ತಿಂಗಳು 6,000/- ಎಂದು ಬರೆದು ಹೊನ್ನಾಪುರ ಗ್ರಾಮೀಣ ಅಂಚೆ ಕಚೇರಿಯ ದಿನಾಂಕ ಮುದ್ರೆಯನ್ನು ಒತ್ತಿ, ಠೇವಣಿದಾರರಿಂದ ಸ್ವೀಕರಿಸಿದ ಹಣವನ್ನು ಇಲಾಖಾ ಲೆಕ್ಕಕ್ಕೆ ತೆಗೆದುಕೊಳ್ಳದೇ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಜನರನ್ನು ನಂಬಿಸಿ ಇಲಾಖೆಗೆ ಹಾಗೂ ಜನರಿಗೆ ವಂಚಿಸಿರುತ್ತಾರೆ. ಈ ಖಾತೆಯು ಹಿರಿಯ ನಾಗರೀಕರ ಉಳಿತಾಯ ಖಾತೆಯಾಗಿ ತೆರೆದಿರುತ್ತಾರೆ. ಇಲಾಖಾ ನಿಯಮಾವಳಿಗಳ ಪ್ರಕಾರ ಗ್ರಾಮೀಣ ಅಂಚೆ ಕಚೇರಿಯಲ್ಲಿ ಮಾಸಿಕ ವರಮಾನ ಖಾತೆ ಹಾಗೂ ಹಿರಿಯ ನಾಗರೀಕರ ಉಳಿತಾಯ ಖಾತೆಯನ್ನು ತೆರೆಯುವ ಹಾಗಿಲ್ಲ, ಆದರೆ ಆರೋಪಿತರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಜನರಿಂದ ಹಣವನ್ನು ಸ್ವೀಕರಿಸಿ ನಂಬಿಕೆ ದ್ರೋಹ ಮಾಡಿ ವಂಚಿಸಿರುತ್ತಾರೆ. ಈ ಸಂಬಂಧ ನನ್ನ ಮುಂದೆ ದಿಃ04/10/2018, ದಿಃ16/10/2018 ಹಾಗೂ ದಿಃ09/01/2019 ರಂದು ಆರೋಪಿತರು ನೀಡಿದ ಹೇಳಿಕೆಯಲ್ಲಿ ತಾವು ಮಾಡಿರುವ ತಪ್ಪನ್ನು ಒಪ್ಪಿಕೊಂಡಿರುತ್ತಾರೆ. ಹಾಗೆಯೇ ಇಲಾಖೆಗೆ ರೂ.2,10,000/- ಗಳನ್ನು ಕಟ್ಟಿಕೊಟ್ಟಿರುತ್ತಾರೆ.

5. ದಿಃ 29/05/2019 ರಂದು ಆರೋಪಿತರು ನೀಡಿದ ಹೇಳಿಕೆಯಲ್ಲಿ ಹಿರಿಯ ನಾಗರೀಕರ ಉಳಿತಾಯ ಖಾತೆಗೆ ಸಂಬಂಧಿಸಿದಂತೆ ಶ್ರೀಮತಿ ಸರೋಜಮ್ಮ ನವರ ಖಾತೆಗೆ ಸಂಬಂಧಿಸಿದ ವಿಚಾರಣೆಯಲ್ಲಿ ಅವರು ನಾಲ್ಕು ಲಕ್ಷ ರೂಪಾಯಿಗಳನ್ನು ಪಡೆದಿಲ್ಲ ಎಂದು ಹಾಗೂ ಅವರ ಹೆಸರಿನಲ್ಲಿ ಯಾವುದೇ SCSS ಖಾತೆ ತೆರೆದಿಲ್ಲ ಎಂದು ಸುಳ್ಳು ಹೇಳಿರುತ್ತಾರೆ. ಶ್ರೀಮತಿ ಸರೋಜಮ್ಮ ನವರು ಹಾಗೆ ಅವರು ಮಗನಾದ ನವೀನ್ ಕುಮಾರ್ ಪಾಸ್ ಪುಸ್ತಕವನ್ನು ಆರೋಪಿಯಿಂದ ಕೇಳಲಾಗಿ ಅವರು ಆ ಪಾಸ್ ಪುಸ್ತಕವನ್ನು ತೋರಿಸಿ ಮರಳಿ ಹಿಂಪಡೆದಿರುತ್ತಾರೆ. ಆ ಸಮಯದಲ್ಲಿ ಸರೋಜಮ್ಮ ನವರ ಮಗನಾದ ಶ್ರೀ ನವೀನಕುಮಾರ ರವರು ತನ್ನ ಮೊಬೈಲ್ ನಿಂದ ಆ ಖಾತೆಯ ಪೋಟೋವನ್ನು ತೆಗೆದುಕೊಂಡಿರುತ್ತಾರೆ. ಹೀಗೆ ಆರೋಪಿತರು ನಾಲ್ಕು ಲಕ್ಷ ರೂಪಾಯಿಗಳನ್ನು ಇಲಾಖೆಗೂ ಸಹ ಕಟ್ಟಿಕೊಟ್ಟಿರುವುದಿಲ್ಲ. ಹೀಗೆ ಆರೋಪಿತರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಮಾಹಿತಿ ನೀಡಿ, ನಂಬಿಕೆ ದ್ರೋಹ ಎಸಗಿದ್ದರಿಂದ ನಾನು ದಿಃ04/06/2019 ರಂದು ಸಂಜೆ 4.30 ಗಂಟೆಗೆ ಠಾಣಾಧಿಕಾರಿಗಳು, ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ.

6. ತದನಂತರ ದಿಃ 05/06/2019 ರಂದು ಕೃತ್ಯ ನಡೆದ ಸ್ಥಳದ ಮಹಜರ್ ಗಾಗಿ ಕಣಗಾಲ್ ಅಂಚೆ ಕಚೇರಿಗೆ ಸೇರಿದ ಹೊನ್ನಾಪುರ ಗ್ರಾಮೀಣ ಅಂಚೆ ಕಚೇರಿಗೆ ಪೊಲೀಸರು ಬಂದಿದ್ದು, ನನ್ನ, ಚಾಸಾ-16 ಮತ್ತು 17 ರವರ ಸಮಕ್ಷಮ ಪೊಲೀಸರು ಬೆಳಿಗ್ಗೆ 9.30 ರಿಂದ 10.30 ರವರೆಗೆ ಸ್ಥಳ ಮಹಜರ್ ಕ್ರಮ ಜರುಗಿಸಿರುತ್ತಾರೆ.

7. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.2(ಎ)** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಸಸಅ ರವರು ಸಮಯ ಕೋರಿದ್ದು ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.,**

**ಪಿರಿಯಾಪಟ್ಟಣ.**